ಕರ್ನಾಟಕ ವಿಜ್ಞಾನ ಮತ್ತು

ತಂತ್ರಜ್ಞಾನ ಅಕಾಡೆಮಿ

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ,

ಕರ್ನಾಟಕ ಸರ್ಕಾರ

# ವಾರ್ಷಿಕ ವರದಿ

# 2021–'22

**ಕರ್ನಾಟಕ ವಿಜ್ಞಾನ ಮತು ತಂತ್ರಜ್ಞಾನ ಅಕಾಡೆಮಿ**

ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ, ತೋಟಗಾರಿಕೆ ವಿಜ್ಞಾನಗಳ
ಕಾಲೇಜು ಪ್ರವೇಶ ದ್ವಾರದ ಹತ್ತಿರ, ಜಿ.ಕೆ.ವಿ.ಕೆ ಆವರಣ, ಮೇಜರ್
ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ, ವಿದ್ಯಾರಣ್ಯಪುರ
ಪೋಸ್ಟ್, ಯಲಹಂಕ, ಬೆಂಗಳೂರು – 560097

## ಪರಿವಿಡಿ


1. ವೆಬಿನಾರ್, ಹೈಬ್ರಿಡ್ & ಭೌತಿಕ ಕಾರ್ಯಕ್ರಮಗಳು 2
2. ಶ್ರೇಷ್ಠ ಪುಸ್ತಕ ಪ್ರಶಸ್ತಿ 6
3. ಪ್ರಬಂಧ ಸ್ಪರ್ಧೆಗಳು 6
4. ದ್ವೈಮಾಸಿಕ ಸಂಚಿಕೆ ವಿಜ್ಞಾನ ಲೋಕ 6
5. ವಿಶೇಷ ಸಂಚಿಕೆ: ಹವಾಮಾನ ವೈಪರೀತ್ಯತೆ 7
6. ತ್ರೈಮಾಸಿಕ ಇ- ಸುದ್ದಿಪತ್ರ - ವಿಜ್ಞಾನ ವಾಹಿನಿ 7
7. ಅಲ್ಪಮೊತ್ತದ ಅನುದಾನ ಮತ್ತು ಅಧ್ಯಯನ 8
8. ವಸ್ತುಸ್ಥಿತಿ ಪತ್ರ 2: ಕರ್ನಾಟಕದ ಸಂಶೋಧನೆ ಮತ್ತು ಅಭಿವೃದ್ಧಿ ಚಿತ್ರಣ 8
9. ವಾರ್ಷಿಕ ಪುಸ್ತಕ 2022 8
10. ಅಪ್ರೋಚ್ ಪತ್ರ 1: ಕರ್ನಾಟಕದಲ್ಲಿ ತೋಟಗಾರಿಕೆ – ಮುಂದಿನ ದಾರಿ 9
11. ವಸ್ತುಸ್ಥಿತಿ ಪತ್ರ 3: ಮ್ಯೂಕರ್‌ಮೈಕೋಸಿಸ್: ಅನುಭವ ಮತ್ತು ಶಿಫಾರಸ್ಸುಗಳು9
12. 'ದುಂಬಿಗಳ ನರ್ತನ' ಪುಸ್ತಕ 9
13. ಸಭೆಗಳು 10
14. ಒಡಂಬಡಿಕೆಗಳು ಮತ್ತು ಸಹಯೋಗಗಳು 10
15. ಅಕಾಡೆಮಿ ಪ್ರಶಸ್ತಿಗಳು 11
16. ಅಕಾಡೆಮಿ ಫೆಲೋಶಿಪ್‌ಗಳು ಮತ್ತು ಸಹವರ್ತಿತ್ವ 14
17. ಸಾಂಸ್ಥಿಕ ಸದಸ್ಯತ್ವ 15
18. ವಿಜ್ಞಾನ ಸರ್ವತ್ರ ಪೂಜ್ಯತೆ ವಿಜ್ಞಾನ ಸಪ್ತಾಹ 15
19. ಡಿಜಿಟಲ್ ಸಂಪನ್ಮೂಲಗಳ ತಯಾರಿಕೆ 16
20.ವಿಜ್ಞಾನ ಮತ್ತು ತಂತ್ರಜಾನ ವಾರ್ಷಿಕ ಸಮ್ಮೇಳನ 16
21. ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನ

ಸಂಪರ್ಕಿಸಬೇಕಾದ ವಿಳಾಸ: 17

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

### ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗ ಸಂಸ್ಥೆಯಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು 2005 ರಿಂದ ಕಾರ್ಯನಿರ್ವಹಿಸುತ್ತಿದ್ದು, ವಿಜ್ಞಾನ ಸಂವಹನ, ತಂತ್ರಜ್ಞಾನ ಪ್ರಸಾರ, ಸಾಮಾಜಿಕ ಲಾಭಕ್ಕಾಗಿ ನಾವೀನ್ಯತೆ ಮತ್ತು ಉದ್ಯಮ ಶೀಲತೆಗಳನ್ನು ಬೆಳೆಸುವುದು, ಪ್ರತಿಭೆಗಳನ್ನು ಗುರುತಿಸುವುದು, ಸಂಪರ್ಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸಾಮರ್ಥ್ಯ ವೃದ್ಧಿ ಹಾಗೂ ರಾಜ್ಯಕ್ಕೆ ಎಸ್‌ಟಿಐ ಕಾರ್ಯನೀತಿ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಮೂಲಕ ಸಮಾಜದಾದ್ಯಂತ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಉದ್ದೇಶವನ್ನು ಹೊಂದಿದೆ.

ರಾಜ್ಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳ ಬೆಳವಣಿಗೆ, ಮೂಲ ವಿಜ್ಞಾನಕ್ಕೆ ಉತ್ತೇಜನ ಹಾಗೂ ವಿದ್ಯಾರ್ಥಿಗಳಲ್ಲಿ ಮತ್ತು ಜನಸಾಮಾನ್ಯರಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸುವ ಸಲುವಾಗಿ ಅಕಾಡೆಮಿಯನ್ನು ಜುಲೈ 30, 2005 (ಸರ್ಕಾರಿ ಆದೇಶ ಸಂಖ್ಯೆ: ವಿಯಇ 70 ವಿತ್ರಮ 2004) ರಂದು ಪ್ರಸಿದ್ಧ ಬಾಹ್ಯಾಕಾಶ ವಿಜ್ಞಾನಿ ಪದ್ಮವಿಭೂಷಣ ದಿವಂಗತ ಪ್ರೊ. ಯು. ಆರ್. ರಾವ್ ರವರ ಅಧ್ಯಕ್ಷತೆಯಲ್ಲಿ ರಚಿಸಲಾಯಿತು.

ಪ್ರಸ್ತುತ ಪ್ರೊ. ಎಸ್ ಅಯ್ಯಪ್ಪನ್, ಕುಲಾಧಿಪತಿಗಳು, ಕೇಂದ್ರೀಯ ಕೃಷಿ ವಿಶ್ವವಿದ್ಯಾನಿಲಯ, ಇಂಫಾಲ ಮತ್ತು ನಿವೃತ್ತ ಮಹಾ ನಿರ್ದೇಶಕರು, ಭಾರತೀಯ ಕೃಷಿ ಅನುಸಂಧಾನ ಪರಿಷತ್ ಹಾಗೂ ನಿವೃತ್ತ ಕಾರ್ಯದರ್ಶಿಗಳು, ಕೃಷಿ ಸಂಶೋಧನೆ ಮತ್ತು ಶಿಕ್ಷಣ ವಿಭಾಗ, ಭಾರತ ಸರ್ಕಾರ ಇವರು ಅಕಾಡೆಮಿಯ ಅಧ್ಯಕ್ಷರಾಗಿದ್ದು, ಪ್ರಮುಖ ಇಲಾಖೆಗಳ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಪರಿಣತರನ್ನೊಳಗೊಂಡ ನಾಮನಿರ್ದೇಶಿತ ಸದಸ್ಯರು ಮತ್ತು ವಿಶೇಷ ಆಹ್ವಾನಿತರು ಸೇರಿ ಒಟ್ಟು 15 ಸದಸ್ಯರನ್ನು ಹೊಂದಿದೆ.

2021- '22ನೇ ಸಾಲಿನಲ್ಲಿ ಅಕಾಡೆಮಿಯ ವತಿಯಿಂದ ಆಯೋಜಿಸಲಾದ ಪ್ರಮುಖ ಕಾರ್ಯಕ್ರಮಗಳ ವಿವರ ಕೆಳಕಂಡಂತಿದೆ:

1. **ವೆಬಿನಾರ್, ಹೈಬ್ರಿಡ್ & ಭೌತಿಕ ಕಾರ್ಯಕ್ರಮಗಳು**

ಆರ್ಥಿಕ ವರ್ಷ 2021-22ರಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯದ ಮುಂಚೂಣಿ ಕ್ಷೇತ್ರಗಳಲ್ಲಿ 49 ಕಾರ್ಯಕ್ರಮಗಳನ್ನು ವೀಡಿಯೋ ಕಾನ್ಫೆರೆನ್ಸ್ ಮತ್ತು ಭೌತಿಕವಾಗಿ ವಿವಿಧ ಸಂಶೋಧನಾ ಸಂಸ್ಥೆಗಳು, ವಿಜ್ಞಾನ ಕೇಂದ್ರಗಳು, ಶೈಕ್ಷಣಿಕ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಲಾಗಿದ್ದು, ಸುಮಾರು 10300 ಫಲಾನುಭವಿಗಳು ಈ ಕಾರ್ಯಕ್ರಮಗಳ ಪ್ರಯೋಜನವನ್ನು ಪಡೆದಿದ್ದಾರೆ.

**ವೆಬಿನಾರ್**

| ಕ್ರ.ಸಂ | ದಿನಾಂಕ | ವಿಷಯ | ಸಹಯೋಗ | ಫಲಾನುಭವಿಗಳು |
|---|---|---|---|---|
| 1 | 27 ಏಪ್ರಿಲ್, 2021 | ಮಾಸಿಕ ವಿಜ್ಞಾನ ಉಪನ್ಯಾಸ ಸರಣಿ – 08- ತಿಂಗಳ ವಿಜ್ಞಾನ ಉಪನ್ಯಾಸ ಮಾಲೆ -9: ವಿಜ್ಞಾನದ ದಾರಿ – ಡಾ. ಪಾಲಹಳ್ಳಿ ವಿಶ್ವನಾಥ್ | ಗ್ರಾವಿಟಿ ಸೈನ್ಸ್ ಫೌಂಡೇಶನ್, ಚಾಮರಾಜನಗರ | 34 |
| 2 | 30 ಏಪ್ರಿಲ್, 2021 | ಬೌದ್ಧಿಕ ಆಸ್ತಿ ಹಕ್ಕು – ಶ್ರೀ ವಿವೇಕಾನಂದ ಸಾಗರ್ | ಐಸಿಎಆರ್, ನಾವಿಕ್ ಮತ್ತು ಎನ್.ಐ.ವಿ. ಇ.ಡಿ.ಐ. | 244 |

| ಕ್ರ.ಸಂ | ದಿನಾಂಕ | ವಿಷಯ | ಸಹಯೋಗ | ಫಲಾನುಭವಿಗಳು |
|---|---|---|---|---|
| 3 | 07 ಮೇ, 2021 | ಭಾರತದಲ್ಲಿ ಬೌದ್ಧಿಕ ಆಸ್ತಿ ಅರ್ಜಿ ಸಲ್ಲಿಕೆ – ಡಾ. ಎಸ್. ಪದ್ಮನಾಭನ್ | ಐಸಿಎಆರ್, ನಾವಿಕ್ ಮತ್ತು ಎನ್.ಐ.ವಿ. ಇ.ಡಿ.ಐ. | 240 |
| 4 | 13 ಮೇ, 2021 | ಬೌದ್ಧಿಕ ಆಸ್ತಿ ಹಕ್ಕು ದತ್ತಾಂಶಗಳಲ್ಲಿ ಹುಡುಕಾಟ – ಡಾ. ಎಸ್. ಪದ್ಮನಾಭನ್ | ಐಸಿಎಆರ್, ನಾವಿಕ್ ಮತ್ತು ಎನ್.ಐ.ವಿ. ಇ.ಡಿ.ಐ. | 289 |
| 5 | 06 ಮೇ, 2021 | ಕೋವಿಡ್ - 19 ಮತ್ತು ಮಾನಸಿಕ ಆರೋಗ್ಯ - ಡಾ. ಮುರಲೀಧರ್ ಕೇಶವನ್ | - | 87 |
| 6 | 12 ಮೇ, 2021 | ಭಾರತ ಸ್ವತಂತ್ರ ಅಮೃತ ಮಹೋತ್ಸವ ವಿಜ್ಞಾನ ಮತ್ತು ತಂತ್ರಜ್ಞಾನ ಉಪನ್ಯಾಸ ಮಾಲೆ ಉಪನ್ಯಾಸ 1: ನಂಬಿಕೆ ಮತ್ತು ಮಾನಸಿಕ ಆರೋಗ್ಯ: ದೈನಂದಿನ ಜೀವನದಲ್ಲಿ ವೈಜ್ಞಾನಿಕ ಚಿಂತನೆ – ಡಾ. ಸಿ. ಆರ್. ಚಂದ್ರಶೇಖರ್ | - | 87 |
| 7 | 19 ಮೇ, 2021 | ಭಾರತ ಸ್ವತಂತ್ರ ಅಮೃತ ಮಹೋತ್ಸವ ವಿಜ್ಞಾನ ಮತ್ತು ತಂತ್ರಜ್ಞಾನ ಉಪನ್ಯಾಸ ಮಾಲೆ ಉಪನ್ಯಾಸ 2: ವಿಜ್ಞಾನ ಸಂವಹನದಲ್ಲಿ ತೊಡಕುಗಳು ಮತ್ತು ನಿರೀಕ್ಷೆಗಳು – ಶ್ರೀ ನಾಗೇಶ್ ಹೆಗಡೆ | - | 64 |
| 8 | 20 ಮೇ, 2021 | ಕೋವಿಡ್ - 19 ವಿಜ್ಞಾನ ಮತ್ತು ಸಮಾಜಕ್ಕೆ ಪಾಠ | - | 58 |
| 9 | 21 ಮೇ, 2021 | ಕೃಷಿ ಉದ್ಯಮದಲ್ಲಿ ಯುವಕರನ್ನು ಸಶಕ್ತಗೊಳಿಸುವುದು | - | 1054 |
| 10 | 25 ಮೇ, 2021 | ಕೋವಿಡ್ 19 ದೃಷ್ಟಿಕೋನದಲ್ಲಿ ಉತ್ತರ ಕರ್ನಾಟಕದ ಡಯಾಬಿಟಿಕ್ ನಿರೋಧಕ ದೇಶೀಯ ಸಸ್ಯಗಳು | - | 59 |
| 11 | 28 ಮೇ, 2021 | ಹೈನು ಸಂಸ್ಕರಣೆ ಮತ್ತು ಮೌಲ್ಯವರ್ಧನೆ: ಉದ್ಯಮಶೀಲ ಅವಕಾಶಗಳು ಮತ್ತು ಕಾರ್ಯತಂತ್ರಗಳು – ಡಾ. ಟಿ. ಆರ್. ಪುಗಾಲೆಂದಿ | ಐಸಿಎಆರ್, ನಾವಿಕ್ ಮತ್ತು ಎನ್.ಐ.ವಿ. ಇ.ಡಿ.ಐ. | 866 |
| 12 | 31 ಮೇ, 2021 | ತಿಂಗಳ ವಿಜ್ಞಾನ ಉಪನ್ಯಾಸ ಮಾಲೆ -10: ಕೋವಿಡ್ ಮೊದಲ ಹಂತದಿಂದ ಎರಡನೇ ಹಂತ ಮತ್ತು ಮುಂದೆ - ಡಾ. ಎನ್. ಪ್ರಭುದೇವ | ಗ್ರಾವಿಟಿ ಸೈನ್ಸ್ ಫೌಂಡೇಶನ್, ಚಾಮರಾಜನಗರ | 44 |
| 13 | 02 ಜೂನ್, 2021 | ಭಾರತ ಸ್ವತಂತ್ರ ಅಮೃತ ಮಹೋತ್ಸವ ವಿಜ್ಞಾನ ಮತ್ತು ತಂತ್ರಜ್ಞಾನ ಉಪನ್ಯಾಸ ಮಾಲೆ ಉಪನ್ಯಾಸ 3: ಆಹಾರ ಬೆಳೆಗಳ ಆನುವಂಶಿಕ ಪೋಷಕಾಂಶ ಜೈವಪ್ರಭಲೀಕರಣ – ಪ್ರೊ. ಸಿ. ಕಾಮೇಶ್ವರ ರಾವ್ | - | 115 |
| 14 | 05 ಜೂನ್, 2021 | ವಿಶ್ವ ಪರಿಸರ ದಿನಾಚರಣೆ 2021 | ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ, ಮಂಗಳೂರು | 116 |
| 15 | 07 ಜೂನ್, 2021 | ಯುವ ಪೀಳಿಗೆಯ ಆರೋಗ್ಯ ರಕ್ಷಣೆ: ಜೀವನ ಶೈಲಿಯ ಅಪಾಯಕಾರಿ ಅಂಶಗಳನ್ನು ತಗ್ಗಿಸುವುದು – ಡಾ. ಪ್ರತಿಮಾ ಮೂರ್ತಿ | - | 65 |
| 16 | 08 ಜೂನ್, 2021 | ನರಸ್ನಾಯುಕಗಳ ಅಸ್ವಸ್ಥತೆಗಳು: ಒಂದು ಅವಲೋಕನ – ಡಾ. ಗಾಯತ್ರಿ ಎನ್ | - | 121 |
| 17 | 08 ಜೂನ್, 2021 | ಎಲೆಕ್ಟ್ರೋಕಾನ್ವಲ್ಸಿವ್ ಚಿಕಿತ್ಸೆಯ ತಿಳುವಳಿಕೆ – ಡಾ. ಚಿತ್ತರಂಜನ್ ಆಂದ್ರಡೆ | - | 123 |

| ಕ್ರ.ಸಂ | ದಿನಾಂಕ | ವಿಷಯ | ಸಹಯೋಗ | ಫಲಾನುಭವಿಗಳು |
|---|---|---|---|---|
| 18 | ಜೂನ್ 09, 2021 | ಭಾರತ ಸ್ವತಂತ್ರ ಅಮೃತ ಮಹೋತ್ಸವ ವಿಜ್ಞಾನ ಮತ್ತು ತಂತ್ರಜ್ಞಾನ ಉಪನ್ಯಾಸ ಮಾಲೆ ಉಪನ್ಯಾಸ 4: ರೋಗನಿರೋಧಕ ಶಕ್ತಿಯ ವರ್ಧನೆಯಲ್ಲಿ ಆಹಾರ, ಪೌಷ್ಟಿಕತೆ ಮತ್ತು ಜೀವನಶೈಲಿಯ ಪಾತ್ರ – ಡಾ. ವಿ. ಪ್ರಕಾಶ್ | – | 305 |
| 19 | 10 ಜೂನ್, 2021 | ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಆನ್ಲೈನ್ ತರಬೇತಿ ಕಾರ್ಯಕ್ರಮ | ಗ್ರಾವಿಟಿ ಸೈನ್ಸ್ ಫೌಂಡೇಶನ್, ಚಾಮರಾಜನಗರ | 667 |
| 20 | 11 ಜೂನ್, 2021 | ವೆಬಿನಾರ್: ಕೃತಕ ಬುದ್ಧಿಮತ್ತೆ ಸ್ಟಾರ್ಟ ಅಫ್ ಗಳ ಮೂಲಕ ಕೃಷಿ ಕ್ಷೇತ್ರದ ಸಮಸ್ಯೆಗಳ ಪರಿಹಾರ ಮತ್ತು ಭವಿಷ್ಯದ ಅವಕಾಶಗಳ ಪ್ರದರ್ಶನ | ಐಸಿಎಆರ್, ನಾವಿಕ್ ಮತ್ತು ಎನ್.ಐ.ವಿ. ಇ.ಡಿ.ಐ. | 923 |
| 21 | ಜೂನ್ 11, 2021 | ವಿಜ್ಞಾನ್ ಪ್ರಸಾರ್ – 'ಸ್ಕೋಪ್' ಕನ್ನಡ ವೆಬಿನಾರ್: 'ಕರ್ನಾಟಕದ ಬಾವಲಿಗಳು'; ಶ್ರೀ ರಾಜೇಶ್ ಪುಟ್ಟಸ್ವಾಮಯ್ಯ | – | 50 |
| 22 | ಜೂನ್ 16, 2021 | ಭಾರತ ಸ್ವತಂತ್ರ ಅಮೃತ ಮಹೋತ್ಸವ ವಿಜ್ಞಾನ ಮತ್ತು ತಂತ್ರಜ್ಞಾನ ಉಪನ್ಯಾಸ ಮಾಲೆ ಉಪನ್ಯಾಸ 5: ವಿಜ್ಞಾನದಲ್ಲಿ ಸಮಾನತೆ ಮತ್ತು ಅಂತರ್ವೇಶನ– ಡಾ. ಗೋಡ್ಬೋಲೆ ರೋಹಿಣಿ ಮಧುಸೂದನ್ | – | 164 |
| 23 | ಜೂನ್ 23, 2021 | ಭಾರತ ಸ್ವತಂತ್ರ ಅಮೃತ ಮಹೋತ್ಸವ ವಿಜ್ಞಾನ ಮತ್ತು ತಂತ್ರಜ್ಞಾನ ಉಪನ್ಯಾಸ ಮಾಲೆ ಉಪನ್ಯಾಸ 6: ಅಜ್ಞಾತ ಜಗತ್ತಿನಲ್ಲಿ ರೋಗಿ– ನಾಡೋಜ ಡಾ. ಪಿ. ಎಸ್. ಶಂಕರ್ | – | 142 |
| 24 | ಜುಲೈ 3, 2021 | ಮೆದುಳಿನ ಗೆಡ್ಡೆಯ ಪರಿಚಯ – ಡಾ. ವಾಣಿ ಸಂತೋಷ್ | – | 107 |
| 25 | ಜುಲೈ 07, 2021 | ಉಪನ್ಯಾಸ 7: ಭಾರತೀಯ ಬಾಹ್ಯಾಕಾಶ ಕಾರ್ಯಕ್ರಮ: ಸ್ವತಂತ್ರ ಭಾರತಕ್ಕೆ ಕೊಡುಗೆ – ಡಾ. ಎ. ಎಸ್. ಕಿರಣ್ ಕುಮಾರ್ | – | 477 |
| 26 | ಜುಲೈ 8, 2021 | ಪಾರ್ಕಿನ್ಸನ್ ಕಾಯಿಲೆ – ಡಾ. ಫಲ್ಗುಣಿ ಆನಂದ್ ಅಲ್ಲಾದಿ | – | 161 |
| 27 | ಜುಲೈ 12, 2021 | ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಹೊರತಾದ ವೃತ್ತಿಜೀವನ – ಡಾ. ಕತ್ರೆ ಶಕುಂತಲಾ ಮತ್ತು ಡಾ. ಎಸ್. ಎಂ. ಶಿವಪ್ರಕಾಶ್ | – | 272 |
| 28 | ಜುಲೈ 14, 2020 | ಭಾರತ ಸ್ವತಂತ್ರ ಅಮೃತ ಮಹೋತ್ಸವ ವಿಜ್ಞಾನ ಮತ್ತು ತಂತ್ರಜ್ಞಾನ ಉಪನ್ಯಾಸ ಮಾಲೆ ಉಪನ್ಯಾಸ 8: ಅದು ಏಕೆ ರಾಕೆಟ್ ವಿಜ್ಞಾನ? – ಡಾ. ಬಿ. ಎನ್. ಸುರೇಶ್ | – | 136 |
| 29 | ಜುಲೈ 15, 2020 | ವಯಸ್ಸಾಗುತ್ತಿರುವ ಮೆದುಳು – ಡಾ. ಶಾರದಾ ಸುಬ್ರಮಣಿಯನ್ | – | 61 |
| 30 | ಜುಲೈ 16, 2020 | ಕುತೂಹಲ ಕನ್ನಡ ವಿಜ್ಞಾನ ಜಾಲಗೋಷ್ಠಿ: ಕೋವಿಡ್ ಮತ್ತು ಮಕ್ಕಳು – ಡಾ. ಜಿ. ಎಸ್. ಕುಮಾರ್ | ವಿಜ್ಞಾನ ಪ್ರಸಾರ, ನವದೆಹಲಿ | 69 |
| 31 | ಜುಲೈ 17, 2021 | ವೈದ್ಯಕೀಯದಲ್ಲಿ ನ್ಯಾನೊ ತಂತ್ರಜ್ಞಾನ – ಡಾ. ರುಗ್ಮಣಿ ಮೀನಾಂಬಾಳ್ | – | 87 |
| 32 | ಜುಲೈ 20, 2021 | ಅಂತಾರಾಷ್ಟ್ರೀಯ ಹಣ್ಣು ಮತ್ತು ತರಕಾರಿಗಳ ವರ್ಷಾಚರಣೆ 2021 – ತಜ್ಞರಿಂದ ಉಪನ್ಯಾಸ ಮಾಲೆ – ಡಾ. ಸುನಿಲ್ ಆರ್ಚಾಕ್ | – | 67 |

| ಕ್ರ.ಸಂ | ದಿನಾಂಕ | ವಿಷಯ | ಸಹಯೋಗ | ಫಲಾನುಭವಿಗಳು |
|---|---|---|---|---|
| 33 | ಜುಲೈ 28, 2021 | ಭಾರತ ಸ್ವತಂತ್ರ ಅಮೃತ ಮಹೋತ್ಸವ ವಿಜ್ಞಾನ ಮತ್ತು ತಂತ್ರಜ್ಞಾನ ಉಪನ್ಯಾಸ ಮಾಲೆ ಉಪನ್ಯಾಸ 9: ರಾಷ್ಟ್ರೀಯ ಬಾಹ್ಯಾಕಾಶ ಮುನ್ನಡೆಗಳ ಸಾಮಾಜಿಕ ಪರಿಣಾಮಗಳು – ಡಾ. ಕೆ ಕಸ್ತೂರಿರಂಗನ್ | – | 216 |
| 34 | ಜುಲೈ 30, 2021 | ಮಾಸಿಕ ವಿಜ್ಞಾನ ಉಪನ್ಯಾಸ ಮಾಲೆ: 'ಸ್ಮಾರ್ಟ್ (ನಿಪುಣ) ಕೃಷಿಯೆಡೆಗೆ' – ಪ್ರೊ. ಎಸ್. ಅಯ್ಯಪ್ಪನ್ | ಗ್ರಾವಿಟಿ ಸೈನ್ಸ್ ಫೌಂಡೇಶನ್, ಚಾಮರಾಜನಗರ | 198 |
| 35 | ಆಗಸ್ಟ್ 20, 2021 | ಅಂತಾರಾಷ್ಟ್ರೀಯ ಹಣ್ಣು ಮತ್ತು ತರಕಾರಿಗಳ ವರ್ಷಾಚರಣೆ 2021 – ತಜ್ಞರಿಂದ ಉಪನ್ಯಾಸ ಮಾಲೆ – ಡಾ. ಸಂತೋಷ್ ಅತ್ತಾವರ್ | – | 134 |
| 36 | ಸೆಪ್ಟೆಂಬರ್ 20, 2021 | ಅಂತಾರಾಷ್ಟ್ರೀಯ ಹಣ್ಣು ಮತ್ತು ತರಕಾರಿಗಳ ವರ್ಷಾಚರಣೆ 2021 – ತಜ್ಞರಿಂದ ಉಪನ್ಯಾಸ ಮಾಲೆ – ಡಾ. ಸುಧಾ ಮೈಸೂರು | – | 63 |
| 37 | ಅಕ್ಟೋಬರ್ 4–9, 2021 | ವಿಶ್ವ ಆಹಾರ ದಿನ | ಸೇಂಟ್ ಅಲೋಶಿಯಸ್ ಕಾಲೇಜು, ಮಂಗಳೂರು | 125 |
| 38 | ಅಕ್ಟೋಬರ್ 8, 2021 | ತುರ್ತು ಆಘಾತ ಆರೈಕೆ | ಗಾರ್ಡನ್ ಸಿಟಿ ವಿಶ್ವವಿದ್ಯಾಲಯ, ಬೆಂಗಳೂರು | 210 |
| 39 | ಅಕ್ಟೋಬರ್ 27– 29, 2021 | ನೊಬೆಲ್ ಪ್ರಶಸ್ತಿ ಉಪನ್ಯಾಸ ಸರಣಿ 2021 | – | 70 |
| 44 | ನವೆಂಬರ್ 08 – 10, 2021 | ಆರೋಗ್ಯ ಮತ್ತು ಪೌಷ್ಟಿಕತೆಗಾಗಿ ಹಣ್ಣುಗಳು ಮತ್ತು ತರಕಾರಿಗಳು ರಾಷ್ಟ್ರೀಯ ಸಮ್ಮೇಳನ (ಎಫ್.ವಿಎಚ್.ಎನ್ 2021) | ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ; ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಬೆಂಗಳೂರು ಮತ್ತು ವಿಜ್ಞಾನ ಪ್ರಸಾರ, ನವದೆಹಲಿ | 321 |
| 42 | ನವೆಂಬರ್ 23 – 25, 2021 | ವಿಜ್ಞಾನ ವೀಡಿಯೊಗ್ರಫಿ ತರಬೇತಿ ಕಾರ್ಯಕ್ರಮ | ಕುತೂಹಲಿ, ವಿಜ್ಞಾನ ಪ್ರಸಾರ, ನವದೆಹಲಿ | 105 |
| 40 | ನವೆಂಬರ್ 30– ಡಿಸೆಂಬರ್ 10, 2021 | ವಿಜ್ಞಾನ ಪ್ರತಿಭಾನ್ವೇಷಣೆ ಕಾರ್ಯಕ್ರಮ | ಕೆಸ್ಟೆಪ್ಸ್ | 578 |
| 41 | ಡಿಸೆಂಬರ್ 20 – 31, 2021 | ವಿಜ್ಞಾನ ಪ್ರತಿಭಾನ್ವೇಷಣೆ ಕಾರ್ಯಕ್ರಮ | ಕೆಸ್ಟೆಪ್ಸ್ | 109 |
| 45 | ಡಿಸೆಂಬರ್ 22, 2021 | ಅಂತಾರಾಷ್ಟ್ರೀಯ ವಿಚಾರ ಸಂಕಿರಣ: ಬೋಧನೆ, ಸಂಶೋಧನೆ ಮತ್ತು ಅಭ್ಯಾಸದಲ್ಲಿ ವೈದ್ಯಕೀಯ ನೈತಿಕತೆ | ಬಿಎಲ್.ಡಿಇ ಶ್ರೀ ಬಿ. ಎಂ ಪಾಟೀಲ್ ವೈದ್ಯಕೀಯ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನಾ | 126 |

| ಕ್ರ.ಸಂ | ದಿನಾಂಕ | ವಿಷಯ | ಸಹಯೋಗ | ಫಲಾನುಭವಿಗಳು |
|---|---|---|---|---|
| | | | ಕೇಂದ್ರ, ವಿಜಯಪುರ | |
| 42 | ಜನವರಿ 03 – 29, 2022 | ವಿಜ್ಞಾನ ಪ್ರತಿಭಾನ್ವೇಷಣೆ ಕಾರ್ಯಕ್ರಮ | ಕೆಸ್ಟೆಪ್ಸ್ | 354 |
| 43 | ಮಾರ್ಚ್ 17, 2022 | ಟೆಲಿಮೆಟ್ರಿ ದಿನಾಚರಣೆ | – | 120 |

**ಭೌತಿಕ**

| ಕ್ರ.ಸಂ | ದಿನಾಂಕ | ವಿಷಯ | ಸಹಯೋಗ ಸಂಸ್ಥೆ | ಫಲಾನುಬವಿಗಳು |
|---|---|---|---|---|
| 46 | ಮಾರ್ಚ್ 10, 2022 | ಬಾಹ್ಯಾಕಾಶ ವಿಜ್ಞಾನ ದಿನಾಚರಣೆ | – | 135 |

**ಹೈಬ್ರಿಡ್ (ಆನ್‌ಲೈನ್ & ಭೌತಿಕ)**

| ಕ್ರ.ಸಂ. | ದಿನಾಂಕ | ವಿಷಯ | ಸಹಯೋಗ ಸಂಸ್ಥೆ | ಫಲಾನುಬವಿಗಳು |
|---|---|---|---|---|
| 47 | ಮಾರ್ಚ್ 15-19, 2022 | ಆರ್- ತಂತ್ರಾಂಶ ಬಳಸಿ ಸಂಖ್ಯಾಶಾಸ್ತ್ರೀಯ ದತ್ತಾಂಶ ವಿಶ್ಲೇಷಣೆ ಕಾರ್ಯಾಗಾರ | - | 57 |
| 48 | ಮಾರ್ಚ್ 26 – 30, 2022 | ನ್ಯೂಟ್ರಾಸ್ಯೂಟಿಕಲ್ ವರ್ಲ್ಡ್ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ | ಪದ್ಮಶ್ರೀ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಅಂಡ್ ಸೈನ್ಸ್, ಬೆಂಗಳೂರು | 226 |

## 2. ಶ್ರೇಷ್ಠ ಪುಸ್ತಕ ಪ್ರಶಸ್ತಿ

ಕನ್ನಡದಲ್ಲಿ ವಿಜ್ಞಾನ ವಿಷಯದ ಪುಸ್ತಕಗಳ ಬರವಣಿಗೆಯನ್ನು ಪ್ರೋತ್ಸಾಹಿಸಲು ಹಾಗೂ ಕನ್ನಡದಲ್ಲಿ ವಿಜ್ಞಾನದ ಪುಸ್ತಕಗಳು ಹೆಚ್ಚು ಹೆಚ್ಚಾಗಿ ಹೊರಬರಲು ಅನುವು ಮಾಡಿಕೊಡುವ ಸಲುವಾಗಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ವತಿಯಿಂದ 2009-10ನೇ ಸಾಲಿನಿಂದ 'ಶ್ರೇಷ್ಠ ಪುಸ್ತಕ' ರಾಜ್ಯ ಮಟ್ಟದ ಪ್ರಶಸ್ತಿಯನ್ನು 2 ವರ್ಷಗಳಿಗೊಮ್ಮೆ ನೀಡಲಾಗುತ್ತಿದ್ದು, 2020-21ನೇ ಸಾಲಿನ

**ಕೃಷಿ ವಿಭಾಗ**

ಪುಸ್ತಕ: ಕೃಷಿಲೋಕದೊಳಗೆ

ಲೇಖಕರು: ಡಾ. ವಸಂತ್ ಕುಮಾರ್ ತಿಮಕಾಪುರ



**ವಿಜ್ಞಾನ ವಿಭಾಗ**

ಪುಸ್ತಕ: ಸಹ್ಯಾದ್ರಿ ಕಥನ

ಲೇಖಕರು: ಡಾ. ಕೇಶವ ಎಚ್. ಕೊರ್ಸೆ



ಪುಸ್ತಕ: ತೋಟದ ಲೋಕದ ಪಾಠಗಳು

ಲೇಖಕರು: ಡಾ. ಬಿ. ರೇವತಿ ನಂದನ್



**ವೈದ್ಯಕೀಯ ವಿಭಾಗ**

ಪುಸ್ತಕ: ಸೆರೆಂಡಿಪಿಟಿ–ವೈದ್ಯಲೋಕದ ಅದ್ಭುತ ಆಕಸ್ಮಿಕಗಳು

ಲೇಖಕರು: ಡಾ. ಕಿರಣ್ ವಿ. ಎಸ್.



ಪ್ರಶಸ್ತಿಯನ್ನು ಅಕಾಡೆಮಿಯ ಸರ್ವಸದಸ್ಯರ ಸಭೆಯಲ್ಲಿ ನೀಡಲಾಯಿತು. ಪ್ರಶಸ್ತಿ ಪುರಸ್ಕೃತರ ಪುಸ್ತಕಗಳ ಲೇಖಕರಿಗೆ ತಲಾ ರೂ. 25,000/- ನಗದು ಬಹುಮಾನ ಮತ್ತು ಪ್ರಮಾಣ ಪತ್ರವನ್ನು ನೀಡಿ ಸನ್ಮಾನಿಸಲಾಯಿತು.

## 3. ಪ್ರಬಂಧ ಸ್ಪರ್ಧೆ

ಅಕಾಡೆಮಿಯ ವತಿಯಿಂದ ಸ್ನಾತಕೋತ್ತರ ಮತ್ತು ಪದವಿ ವಿದ್ಯಾರ್ಥಿಗಳು ಹಾಗೂ ಜನಸಾಮಾನ್ಯರಿಗೆ 2020-21ನೇ ಸಾಲಿನಲ್ಲಿ ಪ್ರಬಂಧ ಸ್ಪರ್ಧೆಗಳನ್ನು ನಡೆಸಲಾಯಿತು. ವಿಜೇತರಿಗೆ ಪ್ರಶಸ್ತಿಗಳನ್ನು 2021ರ ಸೆಪ್ಟೆಂಬರ್‌ನಲ್ಲಿ ವಿತರಿಸಲಾಯಿತು. ಪ್ರಬಂಧದ ವಿಷಯಗಳು ಈ ಕೆಳಕಂಡಂತಿವೆ:

| ಸ್ನಾತಕೋತ್ತರ ಪದವಿ | ಪದವಿ | ಜನಸಾಮಾನ್ಯರು |
|---|---|---|
| ಭವಿಷ್ಯದ ಇಂಧನ: ಜಲಜನಕ | ಜಾಗತಿಕ ತಾಪಮಾನ ಏರಿಕೆಯನ್ನು ತಗ್ಗಿಸುವಲ್ಲಿ ಭಾರತದ ಸಾಧನೆಗಳು | ಜಾಗತಿಕ ತಾಪಮಾನ ಏರಿಕೆಯನ್ನು ತಗ್ಗಿಸುವಲ್ಲಿ ನಾಗರೀಕರ ಜವಾಬ್ದಾರಿಗಳು |

## 4. ವಿಜ್ಞಾನ ಲೋಕ

ಅಕಾಡೆಮಿಯು 'ವಿಜ್ಞಾನ ಲೋಕ' ಎಂಬ ದ್ವೈಮಾಸಿಕ ಸಂಚಿಕೆಯನ್ನು 2007ರ ಆಗಸ್ಟ್ ಮಾಹೆಯಿಂದ ನಿರಂತರವಾಗಿ ಪ್ರಕಟಿಸುತ್ತಿದೆ. 2021-22ನೇ ಸಾಲಿನಲ್ಲಿ 06 ಸಂಚಿಕೆಗಳನ್ನು ಪ್ರಕಟಿಸಲಾಗಿದೆ. ಪ್ರತಿ ಸಂಚಿಕೆಯ ತಲಾ 2000 ಪ್ರತಿಗಳನ್ನು ಮುದ್ರಿಸಿ, ಸಂಚಿಕೆಯ ಚಂದಾದಾರರಾದ ರಾಜ್ಯದ ವಿವಿಧ ವಿಜ್ಞಾನ ಪದವಿ ಪೂರ್ವ ಮತ್ತು ವಿಜ್ಞಾನ ಪದವಿ ಕಾಲೇಜು, ವಿಜ್ಞಾನ ಕೇಂದ್ರಗಳು, ಗ್ರಂಥಾಲಯಗಳಿಗೆ ಮತ್ತು ಇನ್ನಿತರರಿಗೆ ಕಳುಹಿಸಿಕೊಡಲಾಗಿದೆ. ವಿಜ್ಞಾನ ಲೋಕದ ಎಲ್ಲಾ ಸಂಚಿಕೆಗೆಗಳನ್ನು ಅಕಾಡೆಮಿಯ ವೆಬ್ ಸೈಟ್ kstacademy.in ನಲ್ಲಿ ಅಪ್ ಲೋಡ್ ಮಾಡಲಾಗಿದೆ.













5. **ವಿಜ್ಞಾನ ಲೋಕ ವಿಶೇಷ ಸಂಚಿಕೆ: ಹವಾಮಾನ ವೈಪರೀತ್ಯತೆ**




ಖ್ಯಾತ ವಿಜ್ಞಾನ ಬರಹಗಾರರು ಹವಾಮಾನ ವೈಪರೀತ್ಯತೆಯ ಬಗ್ಗೆ ಬರೆದಿರುವ ಒಟ್ಟು 29 ಆಹ್ವಾನಿತ ಲೇಖನಗಳನ್ನು ಹೊಂದಿರುವ 120 ಪುಟಗಳ ವಿಶೇಷ ಸಂಚಿಕೆಯನ್ನು ಸಹ ಹೊರತರಲಾಗಿದೆ. ಸದರಿ ವಿಶೇಷ ಸಂಚಿಕೆಯನ್ನು ಚಂದಾದಾರರಿಗೆ ಹಾಗೂ ಪದವಿ ಪೂರ್ವ, ವಿಜ್ಞಾನ ಪದವಿ, ವಿಜ್ಞಾನ ಕೇಂದ್ರಗಳು, ಗ್ರಂಥಾಲಯಗಳು ಮತ್ತು ಇತರೆ ಸಂಸ್ಥೆಗಳಿಗೆ ಕಳುಹಿಸಿಕೊಡಲಾಗಿದೆ.

6. **ತ್ರೈಮಾಸಿಕ ಇ- ಸುದ್ದಿಪತ್ರ – ವಿಜ್ಞಾನ ವಾಹಿನಿ**







ಅಕಾಡೆಮಿಯ ವತಿಯಿಂದ 'ವಿಜ್ಞಾನ ವಾಹಿನಿ' ಇ-ಸುದ್ದಿ ಪತ್ರಿಕೆಯನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಹೊರತರಲಾಗುತ್ತಿದ್ದು, ಆರ್ಥಿಕ ವರ್ಷ 2021-22ರಲ್ಲಿ ಈವರೆವಿಗೂ 3 ಸಂಚಿಕೆಗಳನ್ನು ಹೊರತರಲಾಗಿದೆ. ಇದರಲ್ಲಿ ಆಹ್ವಾನಿತ ಲೇಖನಗಳು, ಅಕಾಡೆಮಿಯ ಕಾರ್ಯಕ್ರಗಳು ಹಾಗೂ ಪ್ರಚಲಿತ ವಿಜ್ಞಾನ ಸುದ್ದಿಗಳನ್ನು ನೀಡಲಾಗುತ್ತಿದೆ.

7. **ಅಲ್ಪಮೊತ್ತದ ಅನುದಾನ ಮತ್ತು ಅಧ್ಯಯನ**

ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಜಾಗೃತಿಯನ್ನು ಪಸರಿಸಲು, ಬೋಧಕ ಸಿಬ್ಬಂದಿಯನ್ನು ವಿಜ್ಞಾನ ಮತ್ತು ತಂತ್ರಜ್ಞಾನದ ಹೊಸ ದಿಗಂತಗಳಿಗೆ ಪರಿಚಯಿಸಲು; ವಿಜ್ಞಾನ ಮತ್ತು ಸಮಾಜಕ್ಕೆ ಸಂಬಂಧಿಸಿದ ಸಮಕಾಲೀನ ವಿಷಯಗಳ ಬಗ್ಗೆ ಜಾಗೃತಿ ಮೂಡಿಸಲು ಕೆಎಸ್‌ಟಿಎ ಕಾರ್ಯಾಗಾರಗಳು, ಸಿಂಪೋಸಿಯಾ ಮತ್ತು ಸೆಮಿನಾರ್‌ಗಳ ಜೊತೆಗೆ ಅಲ್ಪಾವಧಿಯ ಅಧ್ಯಯನಗಳನ್ನೂ ಬೆಂಬಲಿಸುತ್ತಿದೆ. ಆರ್ಥಿಕ ವರ್ಷ 2021-22 ರಲ್ಲಿ 152 ಸಂಸ್ಥೆಗಳನ್ನು ಪ್ರೋತ್ಸಾಹಿಸಲಾಗಿದೆ.

8. **ವಸ್ತುಸ್ಥಿತಿ ಪತ್ರ 2: ಕರ್ನಾಟಕದ ಸಂಶೋಧನೆ ಮತ್ತು ಅಭಿವೃದ್ಧಿ ಚಿತ್ರಣ**

'ಸಮಾಜಕ್ಕಾಗಿ ವಿಜ್ಞಾನ'ದ ಮುನ್ನಡೆಗಳಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದ್ದು, ಬೆಂಗಳೂರು ಜ್ಞಾನ ಕೇಂದ್ರ ಮತ್ತು ದೇಶದ ವಿಜ್ಞಾನ ರಾಜಧಾನಿ ಎನಿಸಿದೆ. ಬಹುಪಕ್ಷೀಯ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಯತ್ನಗಳ ಬಗ್ಗೆ ಮಾಹಿತಿಯನ್ನು ಒದಗಿಸುವ






ವಿವಿಧ ರೀತಿಯ ದತ್ತಸಂಚಯಗಳು ಲಭ್ಯವಿದ್ದರೂ, ಅವುಗಳೆಲ್ಲದರ ಒಂದು ನೋಟ ಒಂದೇ ಕಡೆ ಪಡೆಯುವುದು ಕಷ್ಟಸಾಧ್ಯ. ಅಕಾಡೆಮಿಯು ಸಾರ್ವಜನಿಕ ಮತ್ತು ಕಾರ್ಪೊರೇಟ್ ವಲಯಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯತ್ನಗಳಲ್ಲಿ ತೊಡಗಿಸಿಕೊಂಡಿರುವ ಸಂಸ್ಥೆಗಳು ಮತ್ತು ಮಾನವ ಸಂಪನ್ಮೂಲವನ್ನು ದಾಖಲಿಸುವ ಕಾರ್ಯವನ್ನು ಕೈಗೊಂಡಿತ್ತು, ಅದರ ಪ್ರತಿಫಲವೇ ಈ ಪುಸ್ತಕ. ಇದರಲ್ಲಿ ಸೇರಿಸಲಾದ ಪ್ರಮುಖ ಕ್ಷೇತ್ರಗಳೆಂದರೆ: ಐಸಿಟಿ ಮತ್ತು ಎಲೆಕ್ಟ್ರಾನಿಕ್ಸ್; ಜೈವಿಕ ತಂತ್ರಜ್ಞಾನ; ಶಿಕ್ಷಣ; ಖಗೋಳಶಾಸ್ತ್ರ, ಬಾಹ್ಯಾಕಾಶ ವಿಜ್ಞಾನ ಮತ್ತು ರಕ್ಷಣೆ; ಆರೋಗ್ಯ ಮತ್ತು ಔಷಧ; ಉತ್ಪಾದನೆ ಮತ್ತು ತಯಾರಿಕೆ; ಶಕ್ತಿ; ಕೃಷಿ ಮತ್ತು ಆಹಾರ ತಂತ್ರಜ್ಞಾನ; ಭೂಮಿ, ಪರಿಸರ ಮತ್ತು ಪ್ರವಾಸೋದ್ಯಮ; ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನದ ಮುಂಚೂಣಿ ಕ್ಷೇತ್ರಗಳು. ಇದನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಹೊರತರಲಾಗಿದೆ.

**9. ವಾರ್ಷಿಕ ಪುಸ್ತಕ 2022**




ಅಕಾಡೆಮಿಯ ಫೆಲೋಗಳು, ಅಸೋಸಿಯೇಟ್ಸ್, ಸಾಂಸ್ಥಿಕ ಸದಸ್ಯರು, ಅಸೋಸಿಯೇಟ್ ಸಂಸ್ಥೆಗಳು ಮತ್ತು ಒಡಂಬಡಿಕೆ ಸಂಸ್ಥೆಗಳ ವಿವರಗಳನ್ನು ಒಳಗೊಂಡಿರುವ ವಾರ್ಷಿಕ ಪುಸ್ತಕವನ್ನು ಹೊರತರಲಾಗಿದೆ. ಇದರಲ್ಲಿ 127 ಫೆಲೋಗಳು, 07 ಸಾಂಸ್ಥಿಕ ಸದಸ್ಯರು, 02 ಸಾಂಸ್ಥಿಕ ಸಹವರ್ತಿಗಳು 52 ಸಹವರ್ತಿಗಳು ಹಾಗೂ ಅಕಾಡೆಮಿಯೊಂದಿಗೆ ಒಡಂಬಡಿಕೆ ಹೊಂದಿರುವ 35 ಸಂಸ್ಥೆಗಳ ವಿವರಗಳನ್ನು ನೀಡಲಾಗಿದೆ.

**10. ಅಪ್ರೋಚ್ ಪತ್ರ 1: ಕರ್ನಾಟಕದಲ್ಲಿ ತೋಟಗಾರಿಕೆ – ಮುಂದಿನ ದಾರಿ**




ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬಾಗಲಕೋಟೆಯ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ, ಬೆಂಗಳೂರು ಹಾಗೂ ನವದೆಹಲಿಯ ವಿಜ್ಞಾನ ಪ್ರಸಾರ್ ಸಂಸ್ಥೆಗಳು ಜಂಟಿಯಾಗಿ 'ಕರ್ನಾಟಕದಲ್ಲಿ ತೋಟಗಾರಿಕೆ – ಮುಂದಿನ ದಾರಿ' ಎಂಬ ದಿಕ್ಸೂಚಿ ಪತ್ರಿಕೆಯನ್ನು ಹೊರತರಲಾಗಿದೆ.

**11. ವಸ್ತುಸ್ಥಿತಿ ಪತ್ರ 3: ಮ್ಯೂಕರ್‌ಮೈಕೋಸಿಸ್: ಅನುಭವ ಮತ್ತು ಶಿಫಾರಸ್ಸುಗಳು**




ಮ್ಯೂಕರ್‌ಮೈಕೋಸಿಸ್‌ನ ಪ್ರಾಮುಖ್ಯತೆಯನ್ನು ಪರಿಗಣಿಸಿ, ಅದರ ಬಗ್ಗೆ ಜಾಗೃತಿ ಮೂಡಿಸಲು, ಅಕಾಡೆಮಿಯು ಈ ಅಪ್ರೋಚ್ ಪತ್ರಿಕೆಯನ್ನು ಹೊರತಂದಿದೆ. ಬೆಂಗಳೂರಿನ ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಈ ಹಿಂದೆ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ) ಇಎನ್‌ಟಿ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ. ರವಿಶಂಕರ್ ರವರ

ನೇತೃತ್ವದ ವೈದ್ಯಕೀಯ ತಜ್ಞರ ತಂಡವು ನಡೆಸಿದ ಪ್ರಸ್ತುತಿಗಳು ಮತ್ತು ಚರ್ಚೆಗಳನ್ನು ಈ ಪತ್ರಿಕೆ ಆಧರಿಸಿದೆ. ಇದನ್ನು ವೈದ್ಯಕೀಯ ವಿಜ್ಞಾನಿ, ಎಮೆರಿಟಸ್ ಪ್ರೊಫೆಸರ್ ಆಫ್ ಮೆಡಿಸಿನ್ ಮತ್ತು ಅಕಾಡೆಮಿಯ ವಿಜ್ಞಾನ ಲೋಕ ಸಂಚಿಕೆಯ ಪ್ರಧಾನ ಸಂಪಾದಕರಾದ ಪ್ರೊ. ಪಿ. ಎಸ್. ಶಂಕರ್ ರವರ ಸಂಪಾದಕತ್ವದಲ್ಲಿ ಹೊರತರಲಾಗಿದೆ

**12. 'ದುಂಬಿಗಳ ನರ್ತನ' ಪುಸ್ತಕ ಪ್ರಕಟಣೆ**




ಶ್ರೀಮತಿ ಅರುಂಧತಿ ಸವದತ್ತಿರವರು ಅನುವಾದಿಸಿದ ಕಾರ್ಲ್‌ವಾನ್ ಫ್ರಿಶ್‌ರವರ ಪ್ರಸಿದ್ಧ 'ದಿ ಡ್ಯಾನ್ಸಿಂಗ್ ಬೀಸ್' ಪುಸ್ತಕದ ಕನ್ನಡ ಆವೃತ್ತಿಯನ್ನು ಅಕಾಡೆಮಿಯಿಂದ ಹೊರತರಲಾಗಿದೆ.

**13. ಅಕಾಡೆಮಿ ಸಭೆಗಳು**

**13.1 ವಾರ್ಷಿಕ ಸರ್ವಸದಸ್ಯರ ಸಭೆ:**

- ಅಕಾಡೆಮಿಯ 11ನೇ ಸರ್ವಸದಸ್ಯರ ಸಭೆಯನ್ನು 2021ರ ಆಗಸ್ಟ್ 26 ರಂದು ಅಪರಾಹ್ನ 2:30ರಿಂದ ಸಂಜೆ 3:30ರವರೆಗೆ ನಡೆಸಲಾಯಿತು.

**13.2 ಕಾರ್ಯಕಾರಿ ಸಮಿತಿ ಸಭೆ:**

- 13ನೇ ಕಾರ್ಯಕಾರಿ ಸಮಿತಿ ಸಭೆಯನ್ನು 2021ರ ಆಗಸ್ಟ್ 06 ರಂದು ಅಪರಾಹ್ನ 2:30ರಿಂದ ಸಂಜೆ 4:15ರವರೆಗೆ ನಡೆಸಲಾಯಿತು.
- 14ನೇ ಕಾರ್ಯಕಾರಿ ಸಮಿತಿ ಸಭೆಯನ್ನು 2021ರ ಅಕ್ಟೋಬರ್ 29 ರಂದು ಅಪರಾಹ್ನ 3:00 ರಿಂದ 4:00ರವರೆಗೆ ನಡೆಸಲಾಯಿತು.
- 15ನೇ ಕಾರ್ಯಕಾರಿ ಸಮಿತಿ ಸಭೆಯನ್ನು 2022ರ ಫೆಬ್ರವರಿ 16 ರಂದು ಅಪರಾಹ್ನ 3:00 ರಿಂದ 4:00ರವರೆಗೆ ನಡೆಸಲಾಯಿತು.

**14. ಒಡಂಬಡಿಕೆಗಳು ಮತ್ತು ಸಹಯೋಗಗಳು**

2021 – 22ನೇ ಸಾಲಿನಲ್ಲಿ 17 ಸಂಸ್ಥೆಗಳೊಂದಿಗೆ ಈ ಕೆಳಕಂಡ ಉದ್ದೇಶಗಳಿಗಾಗಿ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದ್ದು, ಈವರೆವಿಗೂ ಒಟ್ಟು 45 ಸಂಸ್ಥೆಗಳೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದೆ

- ವಿಜ್ಞಾನ ಸಂವಹನದ ಮೂಲಕ ನಾಗರೀಕ ಸಮಾಜದ ಎಲ್ಲಾ ಸ್ಥರಗಳಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು

- ಗ್ರಾಮೀಣ ಪ್ರದೇಶಗಳಲ್ಲಿ ಅಕಾಡೆಮಿ-ಫಾರ್ಮ್-ಇಂಡಸ್ಟ್ರಿ ಮೂಲಕ ತಂತ್ರಜ್ಞಾನ ಪ್ರಸರಣ
- ಆವಿಷ್ಕಾರ/ನಾವೀನ್ಯತೆ ಮತ್ತು ಉದ್ಯಮ ಶೀಲತೆ ಬೆಳವಣಿಗೆಯ ಮೂಲಕ ಸಮಾಜದ ಏಳಿಗೆ
- ಸಮ್ಮೇಳನಗಳು ಮತ್ತು ಕಾರ್ಯಕ್ರಮಗಳ ಆಯೋಜನೆ
- ವಿಜ್ಞಾನ ಮತ್ತು ತಂತ್ರಜ್ಞಾನದ ಮುಂಚೂಣಿ ವಿಷಯಗಳಲ್ಲಿ ಸಾಮರ್ಥ್ಯ ವರ್ಧನೆ

| ಕ್ರ.ಸ | ಸಂಸ್ಥೆಗಳು | ಒಡಂಬಡಿಕೆಯ ದಿನಾಂಕ |
|---|---|---|
| 1 | ಕ್ರೈಸ್ಟ್ (ಡೀಮ್ಡ್.ಟುಬಿ ವಿಶ್ವವಿದ್ಯಾನಿಲಯ) | 09.04.2021 |
| 2 | ವೈಕೆಆರ್ ಅಡ್ವೆಂಚರ್ ಸ್ಪೋರ್ಟ್ಸ್ ಅಂಡ್ ಇಕೋ ಟೂರಿಸಮ್, ಬೆಂಗಳೂರು | 15.04.2021 |
| 3 | ರೇವಾ ವಿಶ್ವವಿದ್ಯಾನಿಲಯ, ಬೆಂಗಳೂರು | 16.07.2021 |
| 4 | ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಕಲಬುರಗಿ | 30.07.2021 |
| 5 | ಸ್ವದೇಶಿ ವಿಜ್ಞಾನ ಆಂದೋಲನ—ಕರ್ನಾಟಕ, ಬೆಂಗಳೂರು | 09.08.2021 |
| 6 | ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | 23.09.2021 |
| 7 | ಬೆಂಗಳೂರಿನ ಸಾರ್ವಜನಿಕ ಆರೋಗ್ಯ ಸಂಸ್ಥೆ | 16-11-2021 |
| 8 | ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಗ್ರಿಕ್ಚರಲ್ ಎಕ್ಸ್ ಟೆನ್ಷನ್ ಮ್ಯಾನೇಜ್ ಮೆಂಟ್ (ಎಂಎಎನ್.ಇಎನ್.ಇ), ಹೈದರಾಬಾದ್ | 20-11-2021 |
| 9 | ಬೆಂಗಳೂರು ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು | 01-12-2021 |
| 10 | ಪ್ರಯೋಗಾ ಇನ್ಸ್ಟಿಟ್ಯೂಟ್ ಆಫ್ ಎಜುಕೇಶನ್ ರೀಸರ್ಚ್, ಬೆಂಗಳೂರು | 06-01-2022 |
| 11 | ದಿ. ನ್ಯಾಷನಲ್ ಕಾಲೇಜು, ಸ್ವಾಯತ್ತ, ಜಯನಗರ, ಬೆಂಗಳೂರು | 19-02-2022 |
| 12 | ರಾಮಕೃಷ್ಣ ಮಿಷನ್, ಶಿವನಹಳ್ಳಿ, ಬೆಂಗಳೂರು | 22-02-2022 |
| 13 | ಕೃಷಿ ಕಲ್ಪ ಫೌಂಡೇಶನ್, ಬೆಂಗಳೂರು | 02-03-2022 |
| 14 | ಶ್ರೀ ಬಿ.ಎಂ.ಪಾಟೀಲ್ ವೈದ್ಯಕೀಯ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ವಿಜಯಪುರ | 05-03-2022 |
| 15 | ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ | 30-03-2022 |
| 16 | ಎಂ.ಎಸ್. ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಬೆಂಗಳೂರು | 06-01-2022 |
| 17 | ದಯಾನಂದ ಸಾಗರ್ ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಂಗಳೂರು | 07-04-2022 |

## 15. ಅಕಾಡೆಮಿ ಪ್ರಶಸ್ತಿಗಳು

### 15.1 ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕೃಷಿ ಮತ್ತು ವೈದ್ಯವಿಜ್ಞಾನ (ಸ್ಟೀಮ್) ದಲ್ಲಿ ಪ್ರೊ. ಸಿ. ಎನ್. ಆರ್. ರಾವ್ ಜೀವಮಾನ ಸಾಧನೆ ಪ್ರಶಸ್ತಿ

ಸ್ಟೀಮ್ ಕ್ಷೇತ್ರಕ್ಕೆ ಅವರ ಅತ್ಯುತ್ತಮ ಕೊಡುಗೆಗಳನ್ನು ಗುರುತಿಸಿ, ಕರ್ನಾಟಕ ಮೂಲದ ಶ್ರೇಷ್ಠ ಹಿರಿಯ ವಿಜ್ಞಾನಿ/ತಂತ್ರಜ್ಞರಿಗೆ ಪ್ರತಿ ವರ್ಷ ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಗುತ್ತಿದೆ. ಆಯ್ಕೆಯಾದ ವಿಜ್ಞಾನಿ / ತಂತ್ರಜ್ಞರುಗಳಿಗೆ ಪ್ರಮುಖ ಕಾರ್ಯಕ್ರಮದಲ್ಲಿ ಚಿನ್ನದ ಪದಕ, ರೂ. 2.00 ಲಕ್ಷ ನಗದು ಮತ್ತು ಪ್ರಶಸ್ತಿ ಪತ್ರ ಹಾಗೂ ಸನ್ಮಾನದೊಂದಿಗೆ ಗೌರವಿಸಲಾಗುತ್ತಿದೆ. ಆಯ್ಕೆಯಾದ ಪುರಸ್ಕೃತರ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ. | ವರ್ಷ | ಪುರಸ್ಕೃತರು |
|---|---|---|
| 1 | 2021 | ಪ್ರೊ. ತೆಲ್ಮ ಬಿ.ಕೆ., ನಿವೃತ್ತ ಪ್ರಾಧ್ಯಾಪಕರು & ಜೆ. ಸಿ. ಬೋಸ್ ನ್ಯಾಷನಲ್ ಫೆಲೋ, ತಳವಿಜ್ಞಾನ ವಿಭಾಗ, ಯೂನಿರ್ವಸಿಟಿ ಆಫ್ ಡೆಲ್ಲಿ, ನವದೆಹಲಿ |
| 2 | 2021 | ಡಾ. ಇಡ್ಯಾ ಕರುಣಾಸಾಗರ್, ಸಲಹೆಗಾರರು (ರೀಸರ್ಚ್ & ಪೇಟೆಂಟ್), ನಿಟ್ಟೆ ವಿಶ್ವವಿದ್ಯಾನಿಲಯ, ಮಂಗಳೂರು |



**ಪ್ರೊ. ತೆಲ್ಮಾ ಬಿ.ಕೆ.**
ನಿವೃತ್ತ ಪ್ರಾಧ್ಯಾಪಕರು & ಬೋಸ್ ರಾಷ್ಟ್ರೀಯ ಫೆಲೋ,
ತಳಿಶಾಸ್ತ್ರ ವಿಭಾಗ, ದೆಹಲಿ ವಿಶ್ವವಿದ್ಯಾನಿಲಯ, ನವದೆಹಲಿ



**ಡಾ. ಇಡ್ಯಾ ಕರುಣಾಸಾಗರ್**
ಸಲಹೆಗಾರರು (ಸಂಶೋಧನೆ & ಪೇಟೆಂಟ್),
ನಿಟ್ಟೆ ವಿಶ್ವವಿದ್ಯಾನಿಲಯ, ಮಂಗಳೂರು

### 15.2 ಕನ್ನಡದಲ್ಲಿ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕೃಷಿ ಮತ್ತು ವೈದ್ಯ ವಿಜ್ಞಾನ (ಸ್ಟೀಮ್) ಸಂವಹನಕ್ಕಾಗಿ ಕೆ.ಎಸ್.ಟಿ.ಎ. ಜೀವಮಾನ ಸಾಧನೆ ಪ್ರಶಸ್ತಿ

ಕನ್ನಡದಲ್ಲಿ ಸ್ಟೀಮ್ ಸಂವಹನಕ್ಕೆ ನೀಡಿರುವ ಅತ್ಯುತ್ತಮ ಕೊಡುಗೆಗಳನ್ನು ಗುರುತಿಸಿ, ಹಿರಿಯ ವಿಜ್ಞಾನ ಸಂವಹನಕಾರರಿಗೆ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು. ಆಯ್ಕೆಯಾದ ಪುರಸ್ಕೃತರಿಗೆ ಪ್ರಮುಖ ಕಾರ್ಯಕ್ರಮದಲ್ಲಿ ಚಿನ್ನದ ಪದಕ, ರೂ. 1.00 ಲಕ್ಷ ನಗದು ಮತ್ತು ಪ್ರಶಸ್ತಿ ಪತ್ರ ಹಾಗೂ ಸನ್ಮಾನದೊಂದಿಗೆ ಗೌರವಿಸಲಾಗುವುದು. ಆಯ್ಕೆಯಾದ ಪುರಸ್ಕೃತರ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ. | **ವರ್ಷ** | **ಪುರಸ್ಕೃತರು** |
|---|---|---|
| 1 | 2021 | ಡಾ. ಬಿ. ಎಂ. ಹೆಗಡೆ, ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಮಂಗಳೂರು |
| 2 | 2021 | ಡಾ. ಟಿ. ಆರ್. ಅನಂತರಾಮು, ನಿವೃತ್ತ ಹಿರಿಯ ಭೂವಿಜ್ಞಾನಿ, ಜಿ.ಎಸ್.ಐ, ಬೆಂಗಳೂರು |



**ಡಾ. ಬಿ. ಎಂ. ಹೆಗಡೆ**
ಹಿರಿಯ ಸಮಾಲೋಚಕ ಹೃದಯ ತಜ್ಞರು, ಪಿ.ಎಂ.ಡಿ.ಆರ್.ಸಿ., ಚನ್ನೈ/ ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಮಂಗಳೂರು



**ಡಾ. ಟಿ. ಆರ್. ಅನಂತರಾಮು**
ನಿವೃತ್ತ ಹಿರಿಯ ಭೂವಿಜ್ಞಾನಿ, ಜಿ.ಎಸ್.ಐ., ಬೆಂಗಳೂರು/
ವಿಜ್ಞಾನ ಬರಹಗಾರರು

2021ನೇ ಸಾಲಿನ ಪ್ರೊ. ಸಿ. ಎನ್. ಆರ್. ರಾವ್ ಜೀವಮಾನ ಸಾಧನೆ ಪ್ರಶಸ್ತಿ ಮತ್ತು ವಿಜ್ಞಾನ ಸಂವಹನ ಜೀವಮಾನ ಸಾಧನೆ ಪ್ರಶಸ್ತಿಗಳನ್ನು 2022ರ ಫೆಬ್ರವರಿ 22 ರಂದು ನೀಡಲಾಯಿತು. ಕರ್ನಾಟಕ ಸರ್ಕಾರದ ಸನ್ಮಾನ್ಯ ಉನ್ನತ ಶಿಕ್ಷಣ, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ. ಸಿ. ಎನ್. ಅಶ್ವಥ್ ನಾರಾಯಣರವರು ಸಾಧಕರಿಗೆ ಪ್ರಶಸ್ತಿ ಮತ್ತು ಫೆಲೋಶಿಪ್ ಪ್ರದಾನ ಮಾಡಿದರು. ಮಾನ್ಯ ಲೋಕಸಭಾ ಸದಸ್ಯರು/ಮಾಜಿ ಕೇಂದ್ರ ಸಚಿವರು ಆದ ಶ್ರೀ ಡಿ. ವಿ. ಸದಾನಂದಗೌಡ ಅವರು ವಿಶೇಷ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಯಲಹಂಕ ಕ್ಷೇತ್ರದ ಮಾನ್ಯ ಶಾಸಕರು ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಎಸ್. ಆರ್. ವಿಶ್ವನಾಥ್‌ರವರು ವಹಿಸಿದ್ದರು. ಗೌರವಾನ್ವಿತ ಪ್ರಧಾನ ಮಂತ್ರಿಗಳ ಪ್ರಧಾನ ವೈಜ್ಞಾನಿಕ ಸಲಹೆಗಾರರಾದ ಡಾ. ಕೆ. ವಿಜಯರಾಘವನ್‌ರವರು ಹಾಗೂ ಮೂರ್ತಿ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಸುಧಾ ಮೂರ್ತಿರವರು ವಿಡಿಯೋ ಕಾನ್ಫರೆನ್ಸ್ ಮೂಲಕ ಗೌರವಾನ್ವಿತ ಅತಿಥಿಗಳಾಗಿ ಸಮಾರಂಭದಲ್ಲಿ ಭಾಗವಹಿಸಿದ್ದರು. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಡಾ. ಇ. ವಿ. ರಮಣರೆಡ್ಡಿರವರು, ಪದ್ಮಶ್ರೀ ಪುರಸ್ಕೃತರು ಹಾಗೂ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಎಸ್. ಅಯ್ಯಪ್ಪನ್ ರವರು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ತಾಂತ್ರಿಕ ನಿರ್ದೇಶಕರಾದ ಶ್ರೀ ಎ. ಬಿ. ಬಸವರಾಜುರವರು ಹಾಗೂ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ. ಎ. ಎಂ. ರಮೇಶ್ ರವರು ಸಮಾರಂಭದಲ್ಲಿ ಭಾಗವಹಿಸಿದ್ದರು.







16. **ಅಕಾಡೆಮಿ ಫೆಲೋಶಿಪ್‌ಗಳು ಮತ್ತು ಸಹವರ್ತಿತ್ವ**

ವಿಜ್ಞಾನ ಮತ್ತು ತಂತ್ರಜ್ಞಾನ, ವಿಜ್ಞಾನ ಸಂವಹನ / ಜನಪ್ರಿಯಗೊಳಿಸುವಿಕೆ ಮತ್ತು ಪ್ರಸಾರಕ್ಕೆ ಶಿಕ್ಷಣ ತಜ್ಞರು, ಸಂಶೋಧಕರು, ಎಂಜಿನಿಯರ್‌ಗಳು, ಸಂಸ್ಥೆಗಳು ಮತ್ತು ಉದ್ಯಮದಲ್ಲಿರುವ ತಂತ್ರಜ್ಞರು ಹಾಗೂ ಭರವಸೆಯ ಯುವ ವೃತ್ತಿಪರರ ಕೊಡುಗೆಗಳನ್ನು ಗುರುತಿಸಲು ಫೆಲೋಶಿಪ್

ಮತ್ತು ಸಹವರ್ತಿತ್ವವನ್ನು ನೀಡಲಾಗುತ್ತಿದೆ. 2021-22ನೇ ಸಾಲಿನಲ್ಲಿ ಒಟ್ಟು 28 ಗೌರವ ಫೆಲೋಶಿಪ್, 22 ಫೆಲೋಶಿಪ್, 02 ಸಹವರ್ತಿ ಸಂಸ್ಥೆಗಳು ಮತ್ತು 22 ಸಹವರ್ತಿತ್ವಗಳನ್ನು ನೀಡಲಾಗಿದೆ:

**17. ಸಾಂಸ್ಥಿಕ ಸದಸ್ಯತ್ವ**

ಕಾರ್ಪೊರೇಟ್ ಸೇರಿದಂತೆ ಶಿಕ್ಷಣ, ಸಂಶೋಧನೆ ಮತ್ತು ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿರುವ ಮತ್ತು ಕೆಎಸ್‌ಟಿಎ ಕಾರ್ಯಕ್ರಮಗಳಲ್ಲಿ ಆಸಕ್ತಿ ಹೊಂದಿರುವ ಸಂಸ್ಥೆಗಳು ಸಾಂಸ್ಥಿಕ ಸದಸ್ಯತ್ವಕ್ಕೆ ಅರ್ಹವಾಗಿರುತ್ತವೆ. ಸಾಂಸ್ಥಿಕ ಸದಸ್ಯತ್ವವನ್ನು ಪಡೆಯಲು ಬಯಸುವ ಸಂಸ್ಥೆಗಳು, ರೂ. 1,00,000/- (ಒಂದು ಲಕ್ಷ ರೂಪಾಯಿಗಳು ಮಾತ್ರ) ಶುಲ್ಕ ಮತ್ತು ಆಸಕ್ತಿಯ ಪತ್ರವನ್ನು ವರ್ಷದ ಯಾವುದೇ ಸಮಯದಲ್ಲಿ ಸಲ್ಲಿಸಬಹುದಾಗಿದ್ದು, 2021-22ನೇ ಸಾಲಿನಲ್ಲಿ 05 ಸಂಸ್ಥೆಗಳು ಸದಸ್ಯತ್ವವನ್ನು ಪಡೆದಿವೆ. ಇಲ್ಲಿಯವರೆಗೆ ಒಟ್ಟು 08 ಸಂಸ್ಥೆಗಳು ಸದಸ್ಯತ್ವವನ್ನು ಪಡೆದಿವೆ.

**18. ವಿಜ್ಞಾನ ಸರ್ವತ್ರ ಪೂಜ್ಯತೆ ವಿಜ್ಞಾನ ಸಪ್ತಾಹ**

ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ (ಭಾರತದ 75ನೇ ಸ್ವಾತಂತ್ರ್ಯೋತ್ಸವದ ಆಚರಣೆ) ಅಂಗವಾಗಿ ಭಾರತ ಸರ್ಕಾರದ ವಿಜ್ಞಾನ ಮತ್ತು ಇಲಾಖೆಯ ಅಂಗಸಂಸ್ಥೆಯಾದ ವಿಜ್ಞಾನ್ ಪ್ರಸಾರ್ ಸಂಸ್ಥೆಯ ಸಹಯೋಗದೊಂದಿಗೆ 2022ರ ಫೆಬ್ರವರಿ 22 -28ರ ವಾರವನ್ನು "ವಿಜ್ಞಾನ ಸರ್ವತ್ರ ಪೂಜ್ಯತೆ" ಎಂಬ ಶೀರ್ಷಿಕೆಯಡಿ ವಿಜ್ಞಾನದ ವೈಭವ ಸಪ್ತಾಹವಾಗಿ ಆಚರಿಸಲಾಗುತ್ತಿದೆ. ಈ ಕಾರ್ಯಕ್ರಮಕ್ಕೆ ಜೈವಿಕ ತಂತ್ರಜ್ಞಾನ ಇಲಾಖೆ, ಡಿ.ಆರ್.ಡಿ.ಒ, ಇಸ್ರೋ, ಸಿ.ಎಸ್.ಐ.ಆರ್, ಭೂ ವಿಜ್ಞಾನ ಮಂತ್ರಾಲಯ ಮತ್ತು ಅಣುಶಕ್ತಿ ಇಲಾಖೆಗಳು ಸಹಯೋಗವನ್ನು ನೀಡುತ್ತಿವೆ. ಈ ವಿಜ್ಞಾನದ ಹಬ್ಬದ ಉದ್ಘಾಟನೆಯನ್ನು ಮಾನ್ಯ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರಾದ ಡಾ. ಅಶ್ವಥ್ ನಾರಾಯಣ ಸಿ. ಎನ್. ಅವರು ಉದ್ಘಾಟಿಸಿದರು. ಮಾನ್ಯ ಲೋಕಸಭಾ ಸದಸ್ಯರು/ಮಾಜಿ ಕೇಂದ್ರ ಸಚಿವರು ಆದ ಶ್ರೀ ಡಿ. ವಿ. ಸದಾನಂದಗೌಡ ಅವರು ವಿಶೇಷ ಅತಿಥಿಗಳಾಗಿ











ಭಾಗವಹಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಮಾನ್ಯ ವಿಧಾನಸಭಾ ಸದಸ್ಯರು ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಎಸ್. ಆರ್. ವಿಶ್ವನಾಥ್‌ರವರು ವಹಿಸಿದ್ದರು. ಪದ್ಮಶ್ರೀ ಪುರಸ್ಕೃತರು ಹಾಗೂ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಎಸ್. ಅಯ್ಯಪ್ಪನ್‌ರವರು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ತಾಂತ್ರಿಕ ನಿರ್ದೇಶಕರಾದ ಶ್ರೀ ಎ. ಬಿ. ಬಸವರಾಜುರವರು ಹಾಗೂ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ. ಎ. ಎಂ. ರಮೇಶ್‌ರವರು ಸಮಾರಂಭದಲ್ಲಿ ಭಾಗವಹಿಸಿದ್ದರು.

**19. ಡಿಜಿಟಲ್ ಸಂಪನ್ಮೂಲಗಳ ತಯಾರಿಕೆ**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (KSEEB) ಪಠ್ಯಕ್ರಮದ ಅನುಸಾರ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಮತ್ತು ಜೀವಶಾಸ್ತ್ರದಲ್ಲಿ ಡಿಜಿಟಲ್ ಬೋಧನೆ ಮತ್ತು ಕಲಿಕಾ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಹಾಗೂ ರಾಜ್ಯದಾದ್ಯಂತ ಆಯ್ದ ಸರ್ಕಾರಿ ಪ್ರೌಢಶಾಲೆಗಳಿಗೆ ಅಂಚೆ ಮೂಲಕ ಕಳುಹಿಸಿಕೊಡಲಾಗುತ್ತಿದೆ. ಕಾರ್ಯಕ್ರಮವನ್ನು ಕೆಸ್ಟೆಪ್ಸ್ ಸಹಯೋಗದಲ್ಲಿ ಅನುಷ್ಠಾಗೊಳಿಸಲಾಗುತ್ತಿದೆ.







**20. ವಿಜ್ಞಾನ ಮತ್ತು ತಂತ್ರಜಾನ ವಾರ್ಷಿಕ ಸಮ್ಮೇಳನ**

ಅಕಾಡೆಮಿಯ ವಾರ್ಷಿಕ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನವನ್ನು 2022ರ ಮೇ ಮಾಹೆಯಲ್ಲಿ ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಇವರ ಸಹಯೋಗದಲ್ಲಿ ತುಮಕೂರಿನಲ್ಲಿ ನಡೆಸಲಾಗುವುದು. ವಿವಿಧ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಗಳು ಹಾಗೂ ಸುಸ್ಥಿರ ಅಭಿವೃದ್ಧಿಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಬಳಕೆಯ ಬಗ್ಗೆ ಖ್ಯಾತ ವಿಜ್ಞಾನಿಗಳಿಂದ ಆಹ್ವಾನಿತ ಉಪನ್ಯಾಸಗಳನ್ನು ಏರ್ಪಡಿಸಲಾಗುವುದು. ಅಲ್ಲದೆ, ಸಂಶೋಧನಾ ವಿದ್ಯಾರ್ಥಿಗಳಿಗೆ ತಮ್ಮ ಸಂಶೋಧನೆಯ ಪೋಸ್ಟರ್‌ಗಳನ್ನು ಪ್ರಸ್ತುತ ಪಡಿಸಲು ಸಹ ಅವಕಾಶ ಕಲ್ಪಿಸಲಾಗುವುದು.

**21. ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನ**

ಕನ್ನಡದಲ್ಲಿ ನಾಲ್ಕನೇ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನವನ್ನು 2022ರ ಜೂನ್-ಜುಲೈ ಮಾಹೆಯಲ್ಲಿ ಬೀದರ್‌ನಲ್ಲಿ ಕರ್ನಾಟಕ ಕಾಲೇಜಿನ ಸಹಯೋಗದಲ್ಲಿ ಆಯೋಜಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ವಿಜ್ಞಾನಿಗಳು, ವಿಜ್ಞಾನ ಬರಹಗಾರರು ಮತ್ತು ಸಂವಹನಕಾರರಿಂದ ಆಹ್ವಾನಿತ ಉಪನ್ಯಾಸಗಳನ್ನು, ಕವಿಗೋಷ್ಠಿ ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಂದ ಕನ್ನಡದಲ್ಲಿ ಪೋಸ್ಟರ್ ಪ್ರಸ್ತುತಿಗಳನ್ನು ಏರ್ಪಡಿಸಲಾಗುತ್ತಿದೆ.

**ಸಂಪರ್ಕಿಸಬೇಕಾದ ವಿಳಾಸ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಕರ್ನಾಟಕ ವಿಜ್ಞಾನ ಮತು ತಂತ್ರಜ್ಞಾನ ಅಕಾಡೆಮಿ
ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ, ತೋಟಗಾರಿಕೆ ವಿಜ್ಞಾನ ಕಾಲೇಜು ಪ್ರವೇಶ ದ್ವಾರದ ಹತ್ತಿರ
ಜಿ.ಕೆ.ವಿ.ಕೆ ಆವರಣ, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ, ವಿದ್ಯಾರಣ್ಯಪುರ
ಪೋಸ್ಟ್, ಯಲಹಂಕ, ಬೆಂಗಳೂರು – 560097
ಫೋನ್/ಫ್ಯಾಕ್ಸ್: 080-29721550; 080-29721549
ವಿ–ಅಂಚೆ: kstacademy.in; ಜಾಲತಾಣ : www.kstacademy.in